ಇತ್ಯಾದಿ ದೇಶಪ್ರೇಮದ ನುಡಿಗಳಿರುತ್ತವೆ. ನಾವು ಚಿಕ್ಕವರಿದ್ದಾಗ 'ಮಾತು ಕಡಿಮೆ-ದುಡಿಮೆ ಹೆಚ್ಚು', 'ಒಂದು ಎರಡು ಬೇಕು - ಮೂರು ಮಕ್ಕಳು ಸಾಕು' ಎಂಬ ವಾಕ್ಯಗಳು ಎಲ್ಲಿ ಬೇಕಲ್ಲಿ ಕಾಣಸಿಗುತ್ತಿದ್ದವು. ಅವುಗಳ ಜಾಗದಲ್ಲಿ ಈಗ ಜಲ ಉಳಿಸುವ, ಭಾರತವನ್ನು ಸ್ವಚ್ಛವಾಗಿಡುವ ಸಂದೇಶಗಳು ಬಂದಿವೆ. ಆದರೂ ಮಕ್ಕಳನ್ನು ನಿಯಂತ್ರಿಸಲು ಸೂಚಿಸುವ ಬರಹವು ತಮ್ಮ ಕಾಲಿಗೆ ತಾವೇ ಕೊಡಲಿ ಹೊಡೆದುಕೊಳ್ಳುವ ಬಗೆಯವು ಎಂದು ನನ್ನ ಅಭಿಮತ. ಈಗಿನ ಮಕ್ಕಳೇ ಮುಂದಿನ ಪಯಣಿಗರು. ಬಸ್ಸು-ರೈಲಿಗೆ ಹತ್ತುವುದಕ್ಕೆ ಜನವಿಲ್ಲದೆ ಹೋದಾರು ಎಂಬ ನದರು ಬೇಡವೇ? ಇಂತಹ ಬರಹಗಳನ್ನು ರಚಿಸಲು ಸರ್ಕಾರವೇ ಒತ್ತಡ ಹೇರುವುದುಂಟು. ಎಮರ್ಜೆನ್ಸಿಯಲ್ಲಿ 'ಭಾರತ ಮುನ್ನಡೆದಿದೆ' ಎಂದು ವಾಹನಗಳ ಮೇಲೆ ಬರೆಯಬೇಕೆಂದು ಹುಕುಂ ಹೊರಡಿಸಲಾಗಿತ್ತು. ಆದರೆ, ತುರ್ತುಪರಿಸ್ಥಿತಿ ವಿರೋಧಿ ಕವಿಯೊಬ್ಬರು, ಈ ಬರಹವನ್ನೇ ಆಧಾರವಾಗಿಟ್ಟುಕೊಂಡು 'ಕೆಟ್ಟುನಿಂತ ಟ್ರಕ್ಕಿನ ಮೇಲೂ ಭಾರತ ಮುನ್ನಡೆದಿದೆ' ಎಂಬ ರೂಪಕವನ್ನು ಮಾಡಿ ಕವಿತೆ ಬರೆದುಬಿಟ್ಟರು. ಬೀದಿಸಾಹಿತ್ಯವು ಚಳವಳಿ ಸಾಹಿತ್ಯಕ್ಕೆ ಪ್ರೇರಣೆ ಕೊಟ್ಟಿತು.

ವಾಹನ ಸಾಹಿತ್ಯದಲ್ಲಿ ಒಳಸಾಹಿತ್ಯ, ಹೊರಸಾಹಿತ್ಯ ಎಂದು ಎರಡು ಭಾಗ ಮಾಡಬಹುದು. ಒಳಸಾಹಿತ್ಯ ಹೆಚ್ಚಾನೆಚ್ಚು ನೀತಿಕೇಂದ್ರಿತ. ಯಾರೋ ಸಾಹಿತ್ಯಪ್ರೇಮಿ ಅಧಿಕಾರಿಯ ಕೈವಾಡದಿ ಕನ್ನಡ ಕಾವ್ಯವೇ ಬಸ್ಸಿನೊಳಗೆ ನುಸುಳಿದೆ. 'ಹೆಮ್ಮೆಯ ನಗೆಯಿರಲಿ, ಹಮ್ಮಿನ ನಗೆಬೇಡ', 'ನಿಮಗೆ ನೀವೇ ದಾರಿದೀಪಗಳು' ಇತ್ಯಾದಿ. ಆದರೆ, ಡಿವಿಜಿಯವರ 'ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು, ಹರುಷಕ್ಕಿದೆ ದಾರಿ' ಎಂಬ ಕಗ್ಗದ ಅರ್ಥ ನನಗಿನ್ನೂ ಸ್ಪಷ್ಟವಾಗಿಲ್ಲ. ಪ್ರಯಣಿಕರೂ ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ನಾನಂತೂ 'ಸಿಕ್ಕ ಮೊದಲ ಬಸ್ಸು ಹತ್ತು. ಎರಡನೆಯದು ಬರುವ ನಂಬಿಕೆಯಿಲ್ಲ' ಎಂಬ ಅರ್ಥದಲ್ಲೇ ಇದನ್ನು ಗ್ರಹಿಸಿದ್ದೇನೆ. ಜೀವನದಲ್ಲಿ ಈ ತತ್ವವನ್ನು ಪಾಲಿಸಿಕೊಂಡು ಬಂದಿದ್ದೇನೆ ಕೂಡ.

ಸಮಸ್ಯೆಯೆಂದರೆ, ಬೀದಿಸಾಹಿತ್ಯದ ಎಚ್ಚರಿಕೆ ನೀತಿಸಂದೇಶಗಳಿಗೆ ಅನುಷ್ಠಾನಕ್ಕಿಂತ ಉಲ್ಲಂಘನೆಯಲ್ಲೇ ಹೆಚ್ಚು. ಮೊದಲಿಗೆ, ಇದು ಮೂತ್ರ ಮಾಡುವ ಜಾಗವಲ್ಲ, ದಯವಿಟ್ಟು ಉಗುಳಬೇಡಿ, ಗೇಟಿನಮುಂದೆ ವಾಹನ ನಿಲ್ಲಿಸಬೇಡಿ - ಇತ್ಯಾದಿ ವಿನಂತಿಗಳಿಂದ ಸಂದೇಶಗಳು ಶುರುವಾಗುತ್ತವೆ. ಬಳಿಕ ದಂಡ ವಿಧಿಸುವ ಅಪರಾಧ ಮತ್ತು ಶಿಕ್ಷೆಯ ವಿನ್ಯಾಸಕ್ಕೆ ನೆಗೆಯುತ್ತವೆ. 'ಕಸ ಹಾಕಬೇಡಿ. ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ', 'ಕಸ ಹಾಕಿದರೆ 500 ರೂ ದಂಡ' ಸೂಚನೆಗೆ ಜನ ಸೊಪ್ಪು ಹಾಕುವುದಿಲ್ಲ. ಸಾಮ ಭೇದಗಳು ಶೋಚನೀಯವಾಗಿ ಸೋತ ಬಳಿಕ ಭಾಷೆ ಮತ್ತು ಒಕ್ಕಣೆ ನಾಟಕೀಯವಾಗಿ ಬದಲುತ್ತವೆ: ಈಚೆಗೆ 'ಇಲ್ಲಿ ಕಸಹಾಕಿದವರು ..ಮಕ್ಕಳು' ಎಂಬ ಫಲಕ ನೋಡಿದೆ. ಅಲ್ಲಿ ಸೋತವರ ಅಸಹಾಯಕತೆಯೂ ಕಂಡಿತು. ಕನ್ನಡ ಶಾಸನಗಳಲ್ಲಿ ಮೊದಮೊದಲು ದಾನಕೊಟ್ಟ ಭೂಮಿಯನ್ನು ರಕ್ಷಿಸಲು ವಿನಂತಿಸುವ, ಅದನ್ನು ಕದ್ದವರನ್ನು ಶಿಕ್ಷಿಸುವ ಸಾಲುಗಳಿದ್ದವು. ಬಳಿಕ ಭೂಗಳ್ಳರು ಹೆಚ್ಚಾದರೆಂದು ಕಾಣುತ್ತದೆ, ಅವರನ್ನು ಆಕ್ರೋಶದಲ್ಲಿ ಬೈಯುವ ಶಾಪಾಶಯಗಳು ಕಿಕ್ಕಿರಿದವು. ನಿಯಮವನ್ನು ಮುರಿಯುವುದು, ನಿಷೇಧಿಸಿದ್ದನ್ನು ಶಿಕ್ಷೆಯ ಭಯವಿಲ್ಲದೆ ಉಲ್ಲಂಘಿಸುವುದು ಜನರ ನಿರಂಕುಶಮತಿಯ ಗುಣ. ಧೂಮಪಾನಿಗಳು ಕ್ಯಾನ್ಸರ್ ಎಚ್ಚರಿಕೆಯನ್ನು ಓದಿಕೊಂಡೇ ಸಿಗರೇಟು ಪ್ಯಾಕನ್ನು ಬಿಚ್ಚುತ್ತಾರೆ. ಬಸ್ಸಿಗೆ ಏರುವವರು 'ಸಾಲಾಗಿ ಬನ್ನಿರಿ' ಬರಹವನ್ನು ಉಜ್ಜಿಕೊಂಡೇ ನುಗ್ಗುತ್ತಾರೆ. ಇಳಿಯುವವರ ಬ್ಯಾಗು ಹತ್ತುವವವರ ಕಂಕುಳಿಗೆ ಸಿಕ್ಕಿಕೊಳ್ಳುತ್ತದೆ. "ಹೊಟ್ಟೆಗೆ ಏನ್ ತಿಂತೀರಪ್ಪ. ಇಳಿಯೋರಿಗೆ ಜಾಗ ಬಿಡಿ. ಹೆಂಗಸರಿದ್ದಾರೆ ಅಂತ ಗೊತ್ತಾಗಲ್ಲವಾ?" ಎಂದು ಗೊಣಗಾಟ ಬರುತ್ತದೆ. ಯಾರೂ ಲೆಕ್ಕಿಸುವುದಿಲ್ಲ. ಸೀಟುಗಳನ್ನು ಮಹಿಳೆಯರಿಗೆ, ಅಂಗವಿಕಲರಿಗೆ, ಹಿರಿಯ ನಾಗರಿಕರಿಗೆ ಮೀಸಲಿಟ್ಟ ಬರಹ ಅಥವಾ ಚಿಲ್ಲರೆ ಕೊಟ್ಟು ಸಹಕರಿಸಿ ಮೊದಲಾದ ವಿನಂತಿಗಳ ಪಾಡಂತೂ ಕೇಳಬಾರದು. ಈಚೆಗೆ ಒಂದು ಬಸ್ಸಿನಲ್ಲಿ, 'ಗೌರವ ಕೊಟ್ಟು ಗೌರವ ಪಡೆಯಿರಿ' ಎಂಬ ಸಾಲನ್ನು ಕಂಡೆ. ಬಹುಶಃ ಕಂಡಕ್ಟರೇ ಮುದ್ದಾಮಾಗಿ ಬರೆಸಿರಬೇಕು. ಯಾಕೆಂದರೆ ಅದು ಸಂಜೆ ಪಟ್ಟಣದಿಂದ ಎಣ್ಣೆಹಾಕಿದ ಹಳ್ಳಿಗರನ್ನು ತುಂಬಿಕೊಂಡು ಮರಳುವ ಬಸ್ಸಾಗಿತ್ತು.

ಈಚೆಗೆ ವಾಹನಗಳಲ್ಲಿ ಬರಹಗಳ ಬದಲು ಸ್ಟಿಕ್ಕರುಗಳು ಆಗಮಿಸುತ್ತಿವೆ. ನೀವು ಮದ್ಯಪಾನ ಬಿಡಬೇಕೇ ಅಥವಾ ಬಿಡಿಸಬೇಕೇ? ಕೇವಲ 15

